# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.61-2013** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಿ.ನಾಗರಾಜೇ ಅರಸ್<br>ನಂಜನಗೂಡು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 20-04-2024.** |

**<u>ಪಾಟೀ ಸವಾಲುಃ ಶ್ರೀ ಕೆ.ಆರ್ ವಕೀಲರಿಂದಃ</u>**

ಸಾಮಾನ್ಯವಾಗಿ ನಾನು ಯಾವುದೇ ಪತ್ರವನ್ನು ಬರೆದ ಸಮಯದಲ್ಲಿ ಅದರ ಕರಡು ಪ್ರತಿಯನ್ನು ಪಕ್ಷಕಾರರಿಗೆ ನೀಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕೆಲವೊಮ್ಮೆ ನಿಡುತ್ತೇನೆ, ಕೆಲವೊಮ್ಮೆ ನೀಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಣ ಸಂದ ರಶೀದಿಯನ್ನು ಬರೆಯುವ ಸಮಯ ಮಂಜುನಾಥ್, ಬಸವರಾಜು, ಜಯಲಕ್ಷ್ಮೀ, ಪುಟ್ಟಸ್ವಾಮಿ ಹಾಗೂ ಪ್ರಕಾಶ್ ರವರ ಇದ್ದರು. ನಾನು ದಿ.14-01-2011 ರಂದು ಪತ್ರವನ್ನು ಸಿದ್ಧಪಡಿಸಿರುತ್ತೇನೆ ಈ ದಾವೆಯಲ್ಲಿ ಈ ಹಿಂದೆಯೇ ವಾದಿ ಮತ್ತು ಪ್ರತಿವಾದಿಗಳ ನಡುವೆ ಕ್ರಯದ ಕರಾರು ಪತ್ರವಾಗಿದ್ದು, ಕ್ರಯದ ಮೊಬಲಗಿನ ಪೈಕಿ ಬಾಕಿ ಇದ್ದ ರೂ.10,000/- ಗಳ ಬಾಬ್ತು ಹಣಕ್ಕೆ ಸಂಬಂಧಿಸಿದಂತೆ ನಾನು ಹಣಸಂದ ರಶೀದಿಯನ್ನು ಬರೆದಿರುತ್ತೇನೆ. ಕ್ರಯದ ವ್ಯವಹಾರವು ರೂ.1,00,000/- ಗಳಿಗೆ ನಡೆದಿತ್ತು, ಅದರ ಪೈಕಿ ಈ ಹಿಂದೆಯೇ ರೂ.90,000/- ಗಳನ್ನು ಸಂದಾಯ ಮಾಡಿದ್ದು ಉಳಿಕೆ ಹಣ ರೂ.10,000/- ಗಳ ಬಾಬ್ತು ನನ್ನ ಸಮಕ್ಷಮ ವ್ಯವಹಾರ ನಡೆದಿರುತ್ತದೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಗೆ ರೂ.10,000/- ಗಳನ್ನು ವಾದಿಯಿಂದ ಕೊಡಿಸಿರುತ್ತೇನೆ ಎಂದರೆ ಸರಿ. ಇದರಿಂದಾಗಿ ಪ್ರತಿವಾದಿಗಳಿಗೆ ರೂ.1,00,000/- ಗಳು ಸಂದಾಯವಾಗಿರುತ್ತದೆ ಎಂದರೆ ಸರಿ.

2. ದಾವಾ ಷೆಡ್ಯೂಲ್ ಸ್ವತ್ತು ಕಂಠಿರಾಯನಪುರ ಗ್ರಾಮದಲ್ಲಿ ಇರುತ್ತದೆ. ನನ್ನ ಸಮಕ್ಷಮ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದರೂ ಸಹ ನಾನು ವಾದಿಯೊಂದಿಗೆ ಶರೀಕಾಗಿ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**